ಹವಾಮಾನ

ಬುಧವಾರ ಗರಿಷ್ಠ ಉಷ್ಣಾಂಶ 28.2°, ಕನಿಷ್ಠ 24.2° ತೇವಾಂಶ:4.0°

ದೇವಸ್ಥಾನದಲ್ಲಿ ವಸ್ತ್ರಸಂಹಿತೆ ಖಂಡಿಸಿ ಅ.21ರಂದು ಪ್ರತಿಭಟನೆ

ಬೆಂಗಳೂರು : ದೇವಸ್ಥಾನ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ ವಸ್ತ್ರಸಂಹಿತೆ ಜಾರಿಗೆ ತರಲು ಮುಂದಾಗಿರುವ ಸರ್ಕಾರದ ಕ್ರಮ ಖಂಡಿಸಿ ಅ.21 ರಂದು ಕನ್ನಡ ಒಕ್ಕೂಟ ಪ್ರತಿಭಟನೆ ನಡೆಸಲು ನಿರ್ಧರಿಸಿದೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವ್ಯಕ್ತಿಯ ವಸ್ತ್ರಧಾರಣೆ ಹಕ್ಕಿನ ಮೇಲೆ ಸರ್ಕಾರ ನಿರ್ಬಂಧ ಹೇರಲು ಮುಂದಾಗಿರುವುದು ಸರಿಯಲ್ಲ. ಪ್ರತಿಯೊಬ್ಬರು ಅವರು ಇಷ್ಟಪಟ್ಟಂತೆ ವಸ್ತ್ರ ಧರಿಸುವ ಸ್ವಾತಂತ್ರ್ಯ ಇದೆ. ಈ ಕಾರಣ ನಾವು ಈ ಹಕ್ಕು ಹರಣವನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ನೋಟ್ ಬ್ಯಾನ್, ಜಿಎಸ್ಟಿ ಭಾರತದ ಆರ್ಥಿಕತೆ ಸದೃಢ : ಜೇಟ್ಲಿ

ವಾಷಿಂಗ್ಟನ್ : ಅಮಾನೀಕರಣ, ಸರಕುಗಳು ಮತ್ತು ಸೇವೆಗಳ ತೆರಿಗೆ(ಜಿಎಸ್ಟಿ) ಪದ್ಧತಿಯಿಂದ ಸರಣಿ ಸುಧಾರಣೆಗಳು ಭಾರತೀಯ ಆರ್ಥಿಕತೆಯನ್ನು ಹೆಚ್ಚು ಸದೃಢವಾಗಿಸಿದೆ ಎಂದು ಹಣಕಾಸು ಸಚಿವ ಆರುಣ ಜೇಟ್ಲಿ ಹೇಳಿದ್ದಾರೆ. ನ್ಯೂಯಾರ್ಕ್‌ನಲ್ಲಿ ಪ್ರತಿಷ್ಠಿತ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಇವು ಸಾಂಸ್ಥಿಕ ಸುಧಾರಣೆಗಳು ಮತ್ತು ರಚನಾತ್ಮಕ ಪರಿವರ್ತನೆಗಳು ಎಂದು ಬಣ್ಣಿಸಿದರು.

ಅಮಾನೀಕರಣದ ಗೌಪ್ಯತೆ ಕಾಯ್ದುಕೊಂಡ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡ ಆವರು, ಈ ವಿಷಯದಲ್ಲಿ ಪಾರದರ್ಶಕತೆ ಅನುಸರಿಸಿದ್ದರೆ ಆದು ವಂಚನೆ ಎಸಗುವವರಿಗೆ ದೊಡ್ಡ ಸಾಧನವಾಗುತ್ತಿತ್ತು ಎಂದು ಹೇಳಿದರು.

ಗ್ರಾಮಮಟ್ಟದಲ್ಲಿ ಮಣ್ಣು ಪರೀಕ್ಷಾ ಘಟಕಗಳ ಸ್ಥಾಪನೆ

ಹಾಸನ : ಯುವ ಜನರಿಗೆ ಉದ್ಯೋಗವಕಾಶವನ್ನು ಸೃಷ್ಟಿಸುವುದು ಮತ್ತು ನಿಗದಿತ ಅವಧಿಯಲ್ಲಿ ಮಣ್ಣು ಮಾದರಿಗಳ ವಿಶ್ಲೇಷಣೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಮಣ್ಣು ಆರೋಗ್ಯ ನಿರ್ವಹಣೆ ಕಾರ್ಯಕ್ರಮದಡಿ ಸ್ಥಳೀಯ ಉದ್ದಿಮೆದಾರರಿಂದ ಗ್ರಾಮಮಟ್ಟದಲ್ಲಿ ಮಣ್ಣುಪರೀಕ್ಷಾ ಘಟಕಗಳ ಪ್ರಾಯೋಜನೆಯಲ್ಲಿ ಗ್ರಾಮೀಣ ಘಟಕದಡಿ ಫಲಾನುಭವಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತದೆ.

ಪ್ರಮುಖವಾಗಿ ಸಂಸದ ಆದರ್ಶ ಗ್ರಾಮ ಯೋಜನೆಯ ಗ್ರಾಮಗಳಲ್ಲಿ ಮಣ್ಣು ಪರೀಕ್ಷಾ ಘಟಕಗಳ ಸ್ಥಾಪನೆಗಾಗಿ ಫಲಾನುಭವಿಗಳನ್ನು ಆಯ್ಕೆ ಮಾಡ ಬೇಕು. ಪ್ರಾಯೋಜನೆಯ ಗರಿಷ್ಠ ವೆಚ್ಚ ರೂ.5 ಲಕ್ಷಗಳಾಗಿದ್ದು ಶೇ.75 ರಷ್ಟನ್ನು ಸಬ್ಸಿಡಿಯನ್ನಾಗಿ ನೀಡಲಾಗುತ್ತದೆ. ಉಳಿದ ಶೇ.25ರಷ್ಟನ್ನು ಉದ್ದಿಮೆದಾರರು ಸ್ವಂತವಾಗಿ ಭರಿಸಬೇಕಾಗಿರುತ್ತದೆ.

ಮಾರ್ಗಸೂಚಿಯನ್ವಯ ಸ್ಥಳೀಯ ಉದ್ದಿಮೆದಾರರಿಂದ ಗ್ರಾಮಮಟ್ಟದಲ್ಲಿ ಸ್ಥಾಪಿಸಲಾಗುವ ಮಣ್ಣು ಪರೀಕ್ಷಾ ಘಟಕಗಳಿಗೆ ಮಣ್ಣು ಮಾದರಿ ಸಂಗ್ರಹಣೆ, ವಿಶ್ಲೇಷಣೆ ಮತ್ತು ಮಣ್ಣು ಆರೋಗ್ಯ ಚೀಟಿ ತಯಾರಿಕೆ ಹಾಗೂ ವಿತರಣೆಗಾಗಿ ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದ ಮಾರ್ಗಸೂಚಿ ಪ್ರಕಾರ ಪ್ರತಿ ಮಣ್ಣು ಮಾದರಿಗೆ 300ರೂಗಳನ್ನು 2 ಕಂತುಗಳಲ್ಲಿ ನೀಡಲಾಗುತ್ತದೆ. ಶೇ.50 ರಷ್ಟು ಪೋರ್ಟಲ್‌ನಲ್ಲಿ ನೋಂದಣಿಯಾದ ನಂತರ ಹಾಗೂ ಉಳಿದ ಶೇ.50 ರಷ್ಟನ್ನು ರೈತರಿಗೆ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಿದ ನಂತರ ರಾಜ್ಯ ಸರ್ಕಾರಿಂದ ಪಾವತಿಸಲಾಗುವುದು.

ಮಣ್ಣು ಆರೋಗ್ಯ ನಿರ್ವಹಣೆ ಕಾರ್ಯಕ್ರಮದಡಿ ಸ್ಥಳೀಯ ಉದ್ದಿಮೆದಾರರಿಂದ ಗ್ರಾಮ ಮಟ್ಟದಲ್ಲಿ ಮಣ್ಣು ಪರೀಕ್ಷಾ ಘಟಕಗಳ ಸ್ಥಾಪನೆಗೆ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯ ಮುಖಾಂತರ ಆಯ್ಕೆ ಮಾಡಿಕೊಳ್ಳಲು ವಿವರವಾದ ಪ್ರಸ್ತಾವನೆಯನ್ನು ಅ.13 ರೊಳಗೆ ಕೃಷಿ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಭೇಟಿ ಮಾಡಬೇಕಾಗಿ ಜಂಟಿ ಕೃಷಿ ನಿರ್ದೇಶಕರು ಸೂಚಿಸಿದ್ದಾರೆ.

ಹಳೇಬೀಡಿನ ಸಿದ್ದಾಪುರ ಕ್ಷೇತ್ರದಿಂದ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿ ಅಧ್ಯಕ್ಷರಾಗಿರುವ ನಗರದ ರೋಟರಿ ಸನ್ ರೈಸ್ ಸದಸ್ಯ ಹರೀಶ್ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಅಧ್ಯಕ್ಷ ಹೆಚ್.ಸಿ. ರಾಜು, ಕಾರ್ಯದರ್ಶಿ ರಾಜಶೇಖರ್ ಮತ್ತು ಖಚಾಂಚಿ ಶ್ರೀನಾಥ್. ಎನ್. ಹಾಗೂ ಸದಸ್ಯರು ಇದ್ದಾರೆ.

ಎಲ್.ಇ.ಡಿ ಬೀದಿ ದೀಪಗಳ ಅಳವಡಿಕೆ

ಹಾಸನ: ನಗರದ ತಣ್ಣೀರು ಹಳ್ಳದಿಂದ ಸಂತೆ ಪೇಟೆ ವೃತ್ತದ ವರೆಗೆ, ಪೃಥ್ವಿ ಥಿಯೇಟರ್‌ನಿಂದ ಡೈರಿ ವೃತ್ತದ ವರೆಗೆ ನಗರಸಭೆ ವತಿಯಿಂದ 14ನೇ ಹಣಕಾಸು ಯೋಜನೆಯಡಿ ಅಳವಡಿಸಲಾಗಿರುವ ಎಲ್.ಇ.ಡಿ ಬೀದಿ ದೀಪಗಳನ್ನು ಶಾಸಕ ಹೆಚ್.ಎಸ್.ಪ್ರಕಾಶ್ ಅವರು ಉದ್ಘಾಟಿಸಿದರು.

ನಗರಸಭೆ ಅಧ್ಯಕ್ಷ ಡಾ|| ಹೆಚ್.ಎಸ್. ಅನಿಲ್ ಕುಮಾರ್, ಆಯುಕ್ತ ಪರಮೇಶ್, ನಗರಸಭೆ ಸದಸ್ಯರು ಈ ಸಂದರ್ಭದಲ್ಲಿ ಹಾಜರಿದ್ದರು.

ಸುಮಾರು 63 ಲಕ್ಷ ರೂಪಾಯಿ ವೆಚ್ಚದಲ್ಲಿ ಎಲ್.ಇ.ಡಿ.ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.



ಕರ್ನಾಟಕ ಅಭಿವೃದ್ಧಿ ತ್ರೈಮಾಸಿಕ ಸಭೆ

ಹಾಸನ: ಜಿಲ್ಲೆಯ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(20 ಅಂಶ ಕಾರ್ಯಕ್ರಮವು ಸೇರಿದಂತೆ) 2017-18 ನೇ ಸಾಲಿನ ಸೆಪ್ಟೆಂಬರ್ 2017 ರ ಅಂತ್ಯದ ಪ್ರಗತಿ ಪರಿಶೀಲನಾ ಸಭೆಯನ್ನು ಅ.13 ರಂದು ಬೆಳಿಗ್ಗೆ 11 ಗಂಟೆಗೆ ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಎ.ಮಂಜು ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಎಚ್.ಎನ್. ನಂಜೇಗೌಡ ನಗರಕ್ಕೆ ಮೂಲಭೂತ ಸೌಕರ್ಯ- ಕಾಮಗಾರಿಗೆ ಚಾಲನೆ

ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ : ಸಚಿವ ಭರವಸೆ

ರಾಮನಾಥಪುರ : ಶಿತಪೀಡಿತವಾಗಿ ಸ್ಥಳಾಂತರವಾದ ಜೆ. ಹೊಸಹಳ್ಳಿ ಗ್ರಾಮವು ನಾಲಾ ಹಂತದ ತಳ ಭಾಗದಲ್ಲಿದ್ದು ಇದರಿಂದ ಇಲ್ಲಿಯ ಮನೆಗಳು ತೇವಾಂಶಕ್ಕೆ ಶಿಥಿಲವಾದ್ದರಿಂದ ಪುನರ್ವಸತಿ ಯೋಜನೆಯಡಿ ರುದ್ರಪಟ್ಟಣ ಕ್ರಾಸ್‌ನಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಎಚ್.ಎನ್. ನಂಜೇಗೌಡರ ನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಸುಮಾರು 1.80 ಲಕ್ಷ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಈ ತ್ವರಿತ ರೀತಿಯಲ್ಲಿ ಗುಣಮಟ್ಟದ ಕಾಮಗಾರಿಗಳನ್ನು ಮಾಡಿ ಶೀಘ್ರ ಮುಗಿಸುವಂತೆ ಪಶು ಸಂಗೋಪನೆ ಮತ್ತು ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎ. ಮಂಜು ಸಂಬಂಧ ಪಟ್ಟ ಅಧಿಕಾರಿ ಕಾರ್ಯಪಾಲಕ ಇಂಜಿನಿಯರ್ ರಂಗಸ್ವಾಮಿ ಮುಂತಾದವರಿಗೆ ಸೂಚಿಸಿದರು.

ರಾಮನಾಥಪುರ ಹೋಬಳಿ ಜೆ. ಹೊಸಹಳ್ಳಿ ಗ್ರಾಮದ ಪಕ್ಕ ಇರುವ ಪುನರ್ವಸತಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ಎಚ್.ಎನ್. ನಂಜೇಗೌಡರ ನಗರದಲ್ಲಿ ಶಾಲಾ ಕೊಠಡಿ ಹಾಗೂ ವಿವಿಧ ಕಾಮಗಾರಿಗೆ ಚಾಲನೆ ನೀಡಿದ ನಂತರ ಕಾರ್ಯಪಾಲಕ ಇಂಜಿನಿಯರ್ ರಂಗಸ್ವಾಮಿ ಹಾಗೂ ವಿವಿಧ ಅಧಿಕಾರಿಗಳೊಂದಿಗೆ ಮಾತನಾಡಿದ ಅವರು ನೀರಾವರಿ ತಜ್ಞ ಹಾಗೂ ಮಾಜಿ ನೀರಾವರಿ ಮಂತ್ರಿಯಾದ ದಿವಂಗತ ಎಚ್.ಎನ್. ನಂಜೇಗೌಡ ಅವರ ಪರಿಶ್ರಮದ ಫಲವಾಗಿ ಈ ಹಿಂದೆ ಈ ಗ್ರಾಮವನ್ನು 1.40 ಕೋಟಿ ರೂ ವೆಚ್ಚದಲ್ಲಿ ಸ್ಥಳಾಂತರಿಸಲಾಗಿತ್ತು. ಇದೀಗ ಹೊಸದಾಗಿ ನಿರ್ಮಾಣವಾಗುತ್ತಿರುವ ನಂಜೇಗೌಡ ನಗರಕ್ಕೆ 1.80 ಲಕ್ಷರೂ ವೆಚ್ಚದಲ್ಲಿ ಬೇಕಾದ



ಎಲ್ಲಾ ರೀತಿಯ ಸೌಲಭ್ಯಗಳನ್ನು ಇಲ್ಲಿಯ ನಿವಾಸಿಗಳಿಗೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇದರ ಕಾಮಗಾರಿಗಳನ್ನು ಉತ್ತಮ ರೀತಿ ಮಾಡಿಸಿಕೊಂಡು ಮಾದರಿ ಗ್ರಾಮವನ್ನಾಗಿ ಮಾಡಿಕೊಳ್ಳುವಂತೆ ಗ್ರಾಮದ ನಿವಾಸಿಗಳಿಗೆ ಸಲಹೆ ನೀಡಿದರು.

ಹೊಸದಾಗಿ ನಿರ್ಮಾಣವಾಗುತ್ತಿರುವ ಇಲ್ಲಿಯ ಎಚ್.ಎನ್. ನಂಜೇಗೌಡರ ನಗರದಲ್ಲಿ ಶಾಲೆಯ ಕಟ್ಟಡದ ನಿರ್ಮಾಣದ 5 ಕೊಠಡಿಗಳಿಗೆ 53.63 ಲಕ್ಷ ರೂ, ಶಾಲಾ ರಂಗಮಂದಿರಕ್ಕೆ 7.60 ಲಕ್ಷ ರೂ, ಶೌಚಾಲಯ ನಿರ್ಮಾಣಕ್ಕೆ 6.90 ಲಕ್ಷ ರೂ, ಶಾಲಾ ಊಟದ ಮನೆ, ಅಡಿಗೆ ಮನೆಗೆ 12.80 ಲಕ್ಷ ರೂ, ಕೌಂಪೌಂಡ್ ಗೋಡೆಗೆ ನಿರ್ಮಾಣಕ್ಕೆ 22.40 ಲಕ್ಷರೂ, ಸಮುದಾಯ ಭವನಕ್ಕೆ 23.30 ಲಕ್ಷರೂ, ದೇವಸ್ಥಾನದ ನಿರ್ಮಾಣ ಹಾಗೂ ಗೋಪುರ ಸೇರಿದಂತೆ 20.30 ಲಕ್ಷ ರೂ, ಕುಡಿಯುವ ನೀರು ಹಾಗೂ ಕೊಳವೆ ಬಾವಿ ಮತ್ತು ಟ್ಯಾಂಕ್ ನಿರ್ಮಾಣಕ್ಕೆ 2.90 ಲಕ್ಷ ರೂ, ವಿದ್ಯುತ್ ಸಂಪರ್ಕ ಮತ್ತು ನೀರು ಸರಬರಾಜು, ಜಲ್ಲಿರಸ್ತೆ, ಅಡ್ಡಮೋರಿಗಳು, ಕಾಂಕ್ರೀಟ್ ಚರಂಡಿಗಳು, ಶಾಲಾ ಆವರಣದಲ್ಲಿ 200 ಮೀಟರ್ ಉದ್ದದ ರಸ್ತೆ ಮತ್ತು ಶಾಲೆಯ ಒಳಗಡೆ ಕಾಂಕ್ರೀಟ್ ರಸ್ತೆಗೆ 12.65 ಲಕ್ಷ ರೂ, ನೀರಿನ ಟ್ಯಾಂಕ್, ಸೈಕಲ್ ಸ್ಟ್ಯಾಂಡ್ ನಿರ್ಮಾಣ, ನೀರು ಸರಬರಾಜು ಕೈ ತೊಳೆಯುವ ಬೇಸಿನ್ ನಿರ್ಮಾಣಕ್ಕೆ 2 ಕಡೆಗೆ ಒಟ್ಟು 15 ಲಕ್ಷ ರೂ ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ, ಕಟ್ಟೇಪುರ- ಕಣಗಾಲು ರಸ್ತೆ ಮಾರ್ಗ ಕಟ್ಟೇಪುರ- ಗೊಬ್ಬಳಿ- ಗೊಬ್ಬಳಿ- ಕಾವಲ್-ಮಾದಪುರ-ಬಸವನಹಳ್ಳಿ ರಸ್ತೆ 6 ಕಿ.ಮೀ. ದೂರದವರೆಗೆ ಅಭಿವೃದ್ಧಿ ಕಾಮಗಾರಿಗೆ 200 ಲಕ್ಷ ರೂ ನೀಡಲಾಗಿದ್ದು ಕಾಮಗಾರಿಯನ್ನು ಉತ್ತಮ ರೀತಿ ಮಾಡಿಸಿಕೊಳ್ಳುವಂತೆ ನಿವಾಸಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೆ ತಂದ ಅನೇಕ ಅಭಿವೃದ್ಧಿ ಪರ ಯೋಜನೆಗಳು ರಾಜ್ಯವನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದ್ದು, ಸಾರ್ವಜನಿಕರ ಜೀವನಕ್ಕೆ ಯಾವುದೇ ತೊಂದರೆಯಾಗದಂತೆ ಎಲ್ಲವನ್ನು ನಿರ್ವಹಿಸಿದ್ದೇವೆ. ಪ್ರತಿ ಹಳಿಗಳಿಗೂ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ರಸ್ತೆ ಹಾಗೂ ಚರಂಡಿಗಳ ನಿರ್ಮಾಣ ಮಾಡುವುದಲ್ಲದೇ ರೈತರ ಹಿತ ಕಾಪಾಡುವುದೇ ಸರ್ಕಾರದ ಪ್ರಮುಖ ಧ್ಯೇಯವಾಗಿದೆ ಎಂದರು.

ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಗ್ರಾಮೀಣ ಪ್ರದೇಶದ ಸಾರ್ವಜನಿಕರ ಕೆಲಸದ ಕಡೆ ಹೆಚ್ಚಿನ ಜವಾಬ್ದಾರಿ ಬಹು ಮುಖ್ಯವಾಗಿದೆ. ರಾಜ್ಯ ಸರ್ಕಾರದ ಯೋಜನೆಗಳನ್ನು ಸ್ಥಳೀಯ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಜನರಿಗೆ ತಲುಪಿಸಲು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಕಾರ್ಯಕರ್ತರು ಒಗ್ಗಟ್ಟಿನಿಂದ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡುವಂತೆ ಕಾರ್ಯಕರ್ತರಿಗೆ ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬ್ಯಾಕ್ ಕಾಂಗ್ರೆಸ್ ಅಧ್ಯಕ್ಷ ಕಬ್ಬಳಿಗೆರೆ ಬೈರೇಗೌಡ, ದೊಡ್ಡಮಗ್ಗೆ ತಾ.ಪಂ. ಮಾಜಿ ಸದಸ್ಯ ರಾಜೇಗೌಡ, ಹಾರಂಗಿ ಮಹಾ ಮಂಡಳ ಅಧ್ಯಕ್ಷ ಚೌಡೇಗೌಡ, ತಾ.ಪಂ. ಮಾಜಿ ಸದಸ್ಯ ಲೋಕನಾಥ್, ಮಾಜಿ ಅಧ್ಯಕ್ಷ ಗುಂಡಣ್ಣ ಹಾಗೂ ಜನಾರ್ಧನ, ಸದಸ್ಯರಾದ ಶಾಂತಮ್ಮ, ಚಂದ್ರೇಗೌಡ, ಮಂಜುನಾಥ್, ಸೋಮಶೇಖರ್, ರಂಗಯ್ಯ, ಸಿದ್ದರಾಜು, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಎಂ.ಎಚ್. ಕೃಷ್ಣಮೂರ್ತಿ, ಪಿ.ಎ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಕುಮಾರಸ್ವಾಮಿ ಇನ್ನಿತರರು ಹಾಜರಿದ್ದರು.

ಜಮೀನು ಕಳೆದುಕೊಂಡ ರೈತರು ನಿವೇನಕ್ಕೆ ಒತ್ತಾಯ

ಪುನರ್ವಸತಿ ಯೋಜನೆಯಡಿಗೆ ನಿವೇಶನ ನೀಡಿದ ಭೂಮಿ ಕಳೆದುಕೊಂಡ ರೈತರು ತಮಗೂ ಒಂದೊಂದು ನಿವೇಶನ ನೀಡುವಂತೆ ರೈತರು ಒತ್ತಾಯಿಸಿದರು. ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎ. ಮಂಜು ಅವರು ಸ್ಥಳೀಯ ಮುಖಂ ಡರು ಕುಳಿತು ಈ ಬಗ್ಗೆ ತೀರ್ಮಾನ ಮಾಡಿಕೊ ಳ್ಳೋಣ ಎಂದು ಇಲ್ಲಿಯ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ಕೊಡಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ಹಾಗೂ ಮುಖ್ಯ ರಸ್ತೆಗಳಿಗೆ 275.00 ಲಕ್ಷರೂ ಕಾಮಗಾರಿಗಳ ಪ್ರಸ್ತಾವನೆ

ಅರಕಲಗೂಡು ಕಣಿವೆಬಸಪ್ಪ-ಹುಲಿಕಲ್-ಹಂಡ್ರಂಗಿ ಮಾರ್ಗ ಕೊಡಗು ಬಾರ್ಡರ್ ರಸ್ತೆ ಸರಪಳಿ.0.00ರಿಂದ 16 ಕಿ.ಮೀ. ದೂರ 750 ಲಕ್ಷ ರೂ, ಹೊಳಲಗೋಡು- ರಸ್ತೆ ವಯಾ ಕತ್ತಿಮಲ್ಲೇನಹಳ್ಳಿ ರಸ್ತೆ 1 ಕಿ.ಮೀ ದೂರ 120 ಲಕ್ಷ ರೂ, ಕೊಣನೂರು ಕೊಳಲು ಗೋಪಾಲಕೃಷ್ಣಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಣಿವೆ ಬಸಪ್ಪರಸ್ತೆವರೆವಿಗೆ 1.30 ಕಿ.ಮೀ ದೂರಕ್ಕೆ 150 ಲಕ್ಷ ರೂ, ಮಾಗಲು ಕೊಪ್ಪಲಿಂದ ಕೂರ್ಗ್ ಬಾರ್ಡರ್‌ವರೆಗೆ 3 ಕಿ.ಮೀ ದೂರ 125 ಲಕ್ಷ ರೂ ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಗ್ರಾಮೀಣ ಪ್ರದೇಶಕ್ಕೆ ಹೆಚ್ಚು ಒತ್ತು :

ಸ್ಥಳೀಯ ಜನಪ್ರತಿ ನಿಧಿಗಳು, ಕಾರ್ಯಕರ್ತರು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯತ್ತ ಗಮನಹರಿಸಿ, ಜನ-ವಸತಿ ಗ್ರಾಮೀಣ ಪ್ರದೇಶಗಳಲ್ಲಿ ಹಾದುಹೋಗಿರುವ ಸಾರ್ವಜನಿಕರ ರಸ್ತೆಗಳು, ಕುಡಿಯುವ ನೀರು, ಉನ್ನತ ಮಟ್ಟದ ಸಾರಿಗೆ ಬಸ್ ವ್ಯವಸ್ಥೆ, ಒಳ ಚರಂಡಿ ವ್ಯವಸ್ಥೆ, ವಿದ್ಯುತ್ ವಿಸ್ತರಣಾ ಘಟಕಗಳ ಉನ್ನತೀಕರಣ, ರಸ್ತೆಗಳ ವಿಸ್ತರಣೆ, ಇನ್ನಿತರ ಮೂಲಭೂತ ಕೆಲಸಗಳ ಬಗ್ಗೆ ಒತ್ತು ನೀಡಬೇಕು ಎಂದು ಸಚಿವ ಎ.ಮಂಜು ಹೇಳಿದರು.

ಸಮಾಜಮುಖಿ ಚಿಂತನೆಗೆ ಎನ್ ಎಸ್ ಎಸ್ ಪೂರಕ

ಬೇಲೂರು: ವಿದ್ಯಾರ್ಥಿಗಳಲ್ಲಿ ಸಮಾಜ ಮುಖಿಯಾಗಿ ಚಿಂತಿಸುವಂತೆ ಹಾಗೂ ಮನೋ ವಿಕಾಸ ಮೂಡಿಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳು ಸಮಾಜಕ್ಕೆ ಸಹಕಾರಿಯಾಗಿವೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀಶಂಭುನಾಥ ಸ್ವಾಮೀಜಿ ಹೇಳಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಘಟಕದಿಂದ ತಾಲೂಕಿನ ತೊಳಲು ಗ್ರಾಮದಲ್ಲಿ ಆಯೋಜಿಸಿದ್ದ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು ರಾಷ್ಟ್ರೀಯ ಸೇವಾ ಯೋಜನೆ ಯನ್ನು ಗ್ರಾಮದ ಸ್ವಚ್ಛತೆ, ಪರಿಸರದ ಜೊತೆ ಮಕ್ಕಳ ಮನೋಜ್ಞಾನ ಹಾಗೂ ಮನೋ ವಿಕಾಸವನ್ನು ಬೆಳಸುವುದಾಗಿದೆ. ಈ ಯೋಜನೆಯಲ್ಲಿ ಪ್ರತಿಯೊಂದು ಗ್ರಾಮವು ಸ್ವಚ್ಛವಾಗಿರಬೇಕು ಎಂಬುದಾಗಿದೆ ಎಂದ ಅವರು ಸಾಲು ಮರದ ತಿಮ್ಮಕ್ಕನ ರೀತಿಯಲ್ಲಿ ಪ್ರತಿಯೊಬ್ಬರು ಗಿಡಗಳನ್ನು ನೆಟ್ಟು ಪರಿಸರವನ್ನು ರಕ್ಷಿಸಿದ್ದೆ ಆದರೆ ಉತ್ತಮ ಮಳೆ ಬೆಳೆಯನ್ನು ಪಡೆಯಲು ಸಾಧ್ಯವಾಗಲಿದೆ

ಹಾಗೂ ಇಂದಿನ ಯುವಜನತೆ ಸರ್ಕಾರ ದಿಂದ ಬರುವಂತಹ ಸವಲತ್ತುಗಳನ್ನು ಪಡೆದು ಕೊಂಡು ಹೆಚ್ಚಿನ ವಿದ್ಯಾಭ್ಯಾಸ ಮಾಡಿ ವಿದೇಶದ ಹಂಗಿಗೆ ಮಾರು ಹೋಗಿದ್ದಾರೆ. ಆದರೆ ಉತ್ತಮ ಸಂಸ್ಕೃತಿಯನ್ನು ಹೊಂದಿರುವ ನಮ್ಮ ದೇಶಕ್ಕೆ ಏನು ಮಾಡಿದ್ದೀವಿ ಎಂಬುದನ್ನು ಅರ್ಥಮಾಡಿಕೊಂಡು ಸಮಾಜ ಮುಖಿ ಯಾಗಿ ಚಿಂತಿಸಿ ಮುಂದಿನ ಹೆಜ್ಜೆ ಇಡುವುದಕ್ಕೆ ಮುಂದಾಗಬೇಕು ಎಂದರು.

ನಂತರ ಮಾತನಾಡಿದ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಹರೀಶ್, ವಿದ್ಯಾರ್ಥಿ ಜೀವನದಲ್ಲಿದ್ದಾಗಲೆ ಸೇವಾ ಮನೋಭಾ ವನೆ ಬರಬೇಕು ಎಂಬ ಉದ್ದೇಶದಿಂದಾಗಿ ಇಂತಹ ರಾಷ್ಟ್ರಿಯ ಸೇವಾ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ವಿದ್ಯಾರ್ಥಿಗಳು ಕೇವಲ ವಿದ್ಯಾಭ್ಯಾಸ ಮಾಡಿದರೆ ಸಾಲದು. ಗ್ರಾಮೀಣ ಭಾಗದ ಪರಿಸ್ಥಿತಿಯನ್ನು ಅರಿತು ಸಾಮಾಜಿಕ ಪರಿಕಲ್ಪನೆ ಹೊಂದುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸುವಂತಹ ಕೆಲಸಕ್ಕೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದರು.

ತಾ.ಪಂ. ಸದಸ್ಯರಾದ ತಮಣ್ಣಗೌಡ,, ಕಿಟ್ಟಿ ಕಮಲಮ್ಮ, ಗ್ರಾ.ಪಂ.ಅಧ್ಯಕ್ಷ ಯಶೋಧ, ಉಪಾಧ್ಯಕ್ಷ ಸುರೇಶ್, ಲಯನ್ಸ್ ಕ್ಲಬ್ ಅಧ್ಯಕ್ಷ ಉಮೇಶ್, ಪೂವಯ್ಯ, ಚಂದ್ರೇಗೌಡ, ಉಪನ್ಯಾಸ ಕರಾದ ಲೋಕೇಗೌಡ, ಸುಂದರೇಶ್, ಲಕ್ಷ್ಮೀ ನಾರಾಯಣ್ ಇನ್ನಿತರರಿದ್ದರು.

ಹಳ್ಳಿ ಜನರಿಗೆ ಸಿಗದ ಕಾನೂನು ಸೌಲಭ್ಯ

ನುಗ್ಗೇಹಳ್ಳಿ : ಸ್ವತಂತ್ರ ಪೂರ್ವದಿಂದಲೂ ವ್ಯವಸ್ಥಿತವಾದ ಆಡಳಿತ ಇಲ್ಲದೆ ಕಾನೂನು ಸುವ್ಯವಸ್ಥೆಯ ಸೌಲಭ್ಯ ಇಂದಿಗೂ ಹಳ್ಳಿಗಳ ಸಾರ್ವಜನಿಕರಿಗೆ ದೊರಕುತ್ತಿಲ್ಲ ಎಂದು ಕರ್ನಾಟಕ ಮಾನವ ಹಕ್ಕುಗಳ ಜನ ಜಾಗೃತಿ ಸಮಿತಿ ರಾಜ್ಯಾಧ್ಯಕ್ಷ ಜ್ಞಾನಪ್ರಕಾಶ್ ತಿಳಿಸಿದರು.

ತಾಲ್ಲೂಕಿನ ನೆಟ್ಟೇಕೆರೆ ಗ್ರಾಮದಲ್ಲಿ ಏರ್ಪಡಿಸಿದ್ದ ಮಾನವ ಹಕ್ಕುಗಳ ಜನ ಜಾಗೃತಿ ಸಮಿತಿ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡುತ್ತ ಉಳ್ಳವರಿಗೆ ಎಲ್ಲ ಸೌಲಭ್ಯಗಳು ದೊರಕುತ್ತ ಹೋದಂತೆಲ್ಲಾ ಇಲ್ಲದವರು ಬೀದಿಪಾಲಾಗುತ್ತಿದ್ದಾರೆ. ಸರ್ಕಾರಗಳು ಶ್ರೀಮಂತ ಬಡವ ಅಥವಾ ಮಧ್ಯಮ ವರ್ಗಗಳ ಭೇದವಿಲ್ಲದೆ ಬದುಕಿಗೆ ಅಗತ್ಯವಿರುವಷ್ಟು ಕಾನೂನು ಯೋಜನೆಗಳನ್ನು ರೂಪಿಸಿದೆ. ಆದರೆ ಕೆಲ ಅಧಿಕಾರಿಗಳು ದುರುಪಯೋಗಪಡಿಸಿಕೊಂಡು ಐಷಾರಾಮಿ ಜೀವನ ನಡೆಸುತ್ತಾರೆ. ರೈತರ ಕಷ್ಟಸುಖಗಳಿಗೆ ಸ್ಪಂದಿಸುವನೊಂದವರಿಗೆ ನ್ಯಾಯ ಕೇಳುವುದು ದಲಿತರು, ನಿರ್ಗತಿಕರು ಕಡುಬಡವರಿಗೆ ಸರ್ಕಾರದ ವಿವಿಧ ಯೋಜನೆಗಳನ್ನು ಭ್ರಷ್ಟಾಚಾರ ರಹಿತವಾಗಿ ಸಿಗುವಂತೆ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಆಗ ಸಮಾಜದ ಅಭಿವೃದ್ಧಿಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ವಿನೋದ್ ರಾಜ್ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದಯ್ಯ, ತಾಲ್ಲೂಕು ಅಧ್ಯಕ್ಷ ಕೃಷ್ಣೇಗೌಡ, ಜಿಲ್ಲಾಧ್ಯಕ್ಷ ರಘು ಶಾಂತ, ಮೋಹನ್, ನಾರಾಯಣ ಸ್ವಾಮಿ, ಷರೀಫ್, ಯುವ ಅಧ್ಯಕ್ಷ ಪವನ್, ಹೊಳೆನರಸೀಪುರ ಯೋಗೇಶ್, ತಮ್ಮಯ್ಯ, ತಿಪಟೂರು ಅಧ್ಯಕ್ಷ ಯೋಗೇಶ್, ಶಿವಣ್ಣ ಪಲ್ಲವಿ, ಬಸವರಾಜ್, ತೋಪೇಗೌಡ, ರಂಗೇಗೌಡ, ಶ್ರೀಕಾಂತ್, ಗಂಗಾಧರ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಮನಸ್ಸಿನ ಹತೋಟಿಗೆ ಧ್ಯಾನ ಅಗತ್ಯ

ಹೊಳೆನರಸೀಪುರ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡಕ್ಕೆ ಸೇರಿದವರು ಹಾಗೂ ಮಾನಸಿಕ ಅಥವಾ ನ್ಯೂನತೆಗಳನ್ನು ಹೊಂದಿದವರು ಉಚಿತ ಕಾನೂನು ಸಲಹೆ ಮತ್ತು ನೆರವು ಪಡೆಯ ಬಹುದು ಎಂದು ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗು ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ರಂಗೇಗೌಡ ತಿಳಿಸಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಾವು ಕಣ್ಣಿಗೆ ಕಾಣದ ಮನಸ್ಸನ್ನು ಹೇಗೆ ಆರೋಗ್ಯವಾಗಿಟ್ಟುಕೊಳ್ಳಬೇಕು, ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಅರಿತುಕೊಳ್ಳಬೇಕು. ಯಾವುದೇ ಧರ್ಮದವರಾಗಿರಲಿ ಹಿಂದೂ, ಕ್ರಿಶ್ಚಿಯನ್ ಅಥವಾ ಮುಸ್ಲಿಂ ಆಗಿರಲಿ ಮನಸ್ಸನ್ನು ಯೋಚನೆ ಮಾಡುವ ರೀತಿಯಲ್ಲಿಟ್ಟುಕೊಳ್ಳಬೇಕಾದರೆ ಧ್ಯಾನ ಮುಖ್ಯ. ಧ್ಯಾನವನ್ನು ಮಾಡುವುದರಿಂದ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಮಹಿಳೆ ಮತ್ತು ಮಕ್ಕಳು ಹಾಗೂ ಕಾರ್ಖಾನೆಯ ಕಾರ್ಮಿಕರು ಗುಂಪು ಘರ್ಷಣೆ, ಗಲಭೆ, ಪ್ರವಾಹ, ಕ್ಷಾಮ, ಭೂಕಂಪ, ಕೈಗಾರಿಕಾ ವಿನಾಶ ಮುಂತಾದವುಗಳಿಗೆ ತುತ್ತಾದವರಿಗೂ ಸಹ ಉಚಿತವಾಗಿ ಕಾನೂನು ನೆರವು ನೀಡಲಾಗುವುದು. ವಾರ್ಷಿಕ ಆದಾಯ 1.50 ಲಕ್ಷರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜಾತಿಯ ಜನರೂ ಸಹ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ರಘು ಮಾನಸಿಕ ಆರೋಗ್ಯ ಕುರಿತು ಉಪನ್ಯಾಸ ನೀಡುತ್ತಾ ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳಿಗೆ ಕಾರಣಗಳ ಬಗ್ಗೆ ವಿವರಿಸುತ್ತಾ ಸಂವಾದದಲ್ಲಿನ ಕೊರತೆ, ವ್ಯಕ್ತಿಗತ ಕೀಳರಿಮೆ, ಕಾರ್ಮಿಕರಿಗೆ ಕೆಳಮಟ್ಟದ ಉತ್ತೇಜನ, ಅತಿಯಾದ ಕೆಲಸ, ಅತಿಯಾದ ಜವಾಬ್ದಾರಿಗಳು ಸಹ ಕೆಲಸಗಾರರಲ್ಲಿನ ಋಣಾತ್ಮಕ ಕೆಲಸದ ವಾತಾವರಣ ಹೀಗೆ ಹಲವಾರು ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ರಾಜೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿ ವಿಶ್ವ ಸಂಸ್ಥೆಯು ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯ ಎಂದು 2017 ರಂದು ಘೋಷಿಸಿದೆ. ಒತ್ತಡದಿಂದಾಗಿ ಸಾಕಷ್ಟು ಮಾನಸಿಕ ಆರೋಗ್ಯ ಏರು ಪೇರಾಗುತ್ತದೆ. ಪ್ರಪಂಚದಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ಸುಮಾರು 500 ರಿಂದ 600 ಮಿಲಿಯನ್ ಜನರು ಮಾನಸಿಕ ಸಮಸ್ಯೆಗಳಿಂದ ಕೆಲಸ ಮಾಡುವ ಸ್ಥಳದಲ್ಲಿ ಬಳಲುತ್ತಿದ್ದಾರೆ. ಪ್ರತಿ ಅಕ್ಟೋಬರ್ 10 ನ್ನು ವಿಶ್ವ ಮಾನಸಿಕ ಆರೋಗ್ಯ ದಿನವೆಂದು ಗುರ್ತಿಸಿ ಮಾನಸಿಕ ಆರೋಗ್ಯದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಉತ್ತಮ ಮಾನಸಿಕ ಆರೋಗ್ಯವನ್ನು ಕಾಪಾಡುವ ಉದ್ದೇಶಗಳನ್ನೊಳಗೊಂಡಿದೆ ಎಂದು ಹೇಳಿದರು.

ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿ ಮಹೇಶ್ ಆರ್., ಅಧಿಕ ಸಿವಿಲ್ ನ್ಯಾಯಾಧೀಶರಾದ ಅರುಣ ಚೌಗುಲೆ, ವಕೀಲರ ಸಂಘದ ಉಪಾಧ್ಯಕ್ಷ ಕೆ.ಪುಟ್ಟರಾಜು, ಕಾರ್ಯದರ್ಶಿ ಬಲರಾಮೇಗೌಡ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಮ್ತಾಜ್ ಉನ್ನೀಸಾ ನಡೆಸಿಕೊಟ್ಟರು. ಹಿರಿಯ ಆರೋಗ್ಯ ಸಹಾಯಕ ಆರ್.ಬಿ.ಪುಟ್ಟೇಗೌಡ ಸ್ವಾಗತಿಸಿ, ಸಾರ್ವಜನಿಕ ಆಸ್ಪತ್ರೆಯ ನೇತ್ರಾಧಿಕಾರಿ ಲೀಲಾಗಂಗಾಧರ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಹೊ.ನ. ಪುರ- ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಂದ ಹಣ ವಸೂಲಿ

ಹೊಳೆನರಸೀಪುರ: ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆ ಇದ್ದರೂ ಬಡರೋಗಿ ಗಳಿಗೆ ಉಚಿತ ಚಿಕಿತ್ಸೆ ಸಮರ್ಪಕವಾಗಿ ಸಿಗುತ್ತಿಲ್ಲ. ಚಿಕಿತ್ಸೆಗೆ ಬರುವ ರೋಗಿಗಳಿಂದ ವೈದ್ಯರು ಹಣವಸೂಲಿ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಪುರಸಭೆಯ ಕಾಂಗ್ರೆಸ್ ಹಾಲಿ ಹಾಗೂ ಮಾಜಿ ಸದಸ್ಯರು ದೂರಿದ್ದಾರೆ.

ಪುರಸಭೆಯ ಕಾಂಗ್ರೆಸ್ ಹಾಲಿ ನಾಮ ನಿರ್ದೇಶಿತ ಸದಸ್ಯ ಗೋವಿಂದರಾಜು ಮಾಜಿ ಸದಸ್ಯರಾದ ಮುಜಾಹೀದ್ ಪಾಷ, ಮತ್ತು ಶ್ರೀನಿವಾಸ್ ಮತ್ತಿತರರು ಹಣ ಸುಲಿಗೆ ಸೇರಿದಂತೆ ಆಸ್ಪತ್ರೆಯಲ್ಲಿನ ಹಲವು ಸಮಸ್ಯೆಗಳ ಕುರಿತು ಮಂಗಳವಾರ ಆಸ್ಪತ್ರೆಯ ಕಾರ್ಯನಿರತ ವೈದ್ಯ ಹೆಚ್.ಕೆ.ರಮೇಶ್ ಅವರಿಗೆ ಮನವಿ ಪತ್ರದಲ್ಲಿ ವಿವರಿಸಿದ್ದಾರೆ.

ಇಲ್ಲಿನ ಆಸ್ಪತ್ರೆಗೆ ಆರ್ಥಿಕವಾಗಿ ಹಿಂದುಳಿದ ಬಡರೋಗಿಗಳೆ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆಗೆ ಬರುತ್ತಾರೆ. ರಾಜ್ಯ ಸರ್ಕಾರ ಬಡರೋಗಿಗಳಿಗೆ ಉಚಿತ ಆರೋಗ್ಯ ಭಾಗ್ಯದೊಂದಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೂ ಇಲ್ಲಿಗೆ ಚಿಕಿತ್ಸೆಗೆಂದು ಬರುವ ರೋಗಿಗಳು ಪ್ರತಿಯೊಂದಕ್ಕೂ ಹಣ ಕೊಡಲೇಬೇಕಾಗಿದೆ. ಬಿ.ಪಿ.ಎಲ್. ಕಾರ್ಡ್ ಹೊಂದಿದ ಹೊರರೋಗಿಗಳಿಂದ ಹೊರರೋಗಿಗಳ ಚೀಟಿ ಪಡೆಯಲು 15 ರೂ ಪಡೆಯಲಾಗುತ್ತಿದೆ. ಸ್ಕ್ಯಾನಿಂಗ್ 50 ರೂ, ಇ.ಸಿ.ಜಿ. ಎಕ್ಸರ್‌ಗೆ 50 ರಿಂದ 200 ರೂ ಎಂ.ಎಲ್.ಗೆ 100 ರೂ ರಕ್ತ ಪರೀಕ್ಷೆಗೆ 50-200 ರೂಗಳನ್ನು ಕಡ್ಡಾಯವಾಗಿ ಸುಲಿಗೆ ಮಾಡಲಾಗುತ್ತಿದೆ. ಅಲ್ಲದೆ ಆಸ್ಪತ್ರೆಯಲ್ಲಿ ದಾಖಲಾಗುವ ಒಳರೋಗಿಗಳಿಂದ ದಿನವೊಂದಕ್ಕೆ 25 ರೂ ಶುಲ್ಕ ತೆಗೆದುಕೊಳ್ಳುವುದಲ್ಲದೆ ದಾಖಲಾದ ರೋಗಿಗಳಿಗೆ ಚಿಕಿತ್ಸೆ ನೀಡಲು ಖಾಸಗಿ ಮೆಡಿಕಲ್ ಸ್ಟೋರ್‌ಗೆ ಚೀಟಿ ಬರೆದು ರೋಗಿ ಕಡೆಯವರಿಂದ ಔಷಧಿ ಮಾತ್ರೆ ಹಾಗೂ ಚುಚ್ಚುಮದ್ದುಗಳನ್ನು ತರಿಸುವ ಪದ್ಧತಿಯನ್ನು ವೈದ್ಯರು ರೂಡಿಸಿಕೊಂಡಿ ದ್ದಾರೆ. ಬಿ.ಪಿ. ಮತ್ತು ಶುಗರ್ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಷ್ಟು ಖರ್ಚಿಗೆ ಹಣ ಸಾಕಾಗದೆ ಹಾಸನದ ಸರ್ಕಾರಿ ಆಸ್ಪತ್ರೆಗೆ ತೆರಳುತ್ತಿರುವುದು ಕಂಡು ಬರುತ್ತಿದೆ. ಇನ್ನೂ ಆಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವಲ್ಲಿ ವಿಫಲವಾಗಿದ್ದು ಪ್ರತಿದಿನ ರೋಗಿಗಳ ಆರೋಗ್ಯ ದೃಷ್ಟಿಯಿಂದ ಫೆನಾಹಿಲ್ ಮಿಶ್ರಿತ ನೀರಿನಿಂದ ನೆಲ ಒರಸ ಬೇಕೆಂಬ ನಿಯಮ ವಿದ್ದರೂ ಬರಿನೀರಿನಿಂದ ಒರೆಸ ಲಾಗುತ್ತಿದೆ. ಇಲ್ಲವೆ ನೀರಿನಿಂದ ತೊಳೆಯಲಾಗುತ್ತಿದೆ ಆಸ್ಪತ್ರೆಯಲ್ಲಿನ ಶೌಚಾಲಯ ಸ್ವಚ್ಛತೆ ಕೂಡ ಸಮರ್ಪಕವಾಗಿಲ್ಲ. ಇದರಿಂದ ಒಳರೋಗಿಗಳ ಪಾಡು ಹೇಳ ತೀರದು ಎಂದು ಸದಸ್ಯರು ಆಸ್ಪತ್ರೆಯಲ್ಲಿನ ಸಮಸ್ಯೆಗಳ ಸರಮಾಲೆಯನ್ನೆ ಬಿಚ್ಚಿಟ್ಟಿದ್ದಾರೆ.

ಇನ್ನು ಆಸ್ಪತ್ರೆಯಲ್ಲಿ ತುರ್ತು ಸಂದರ್ಭದ ರೋಗಿಗಳನ್ನು ಕರೆತರಲು ಮತ್ತು ಹೊರ ಊರಿನ ಆಸ್ಪತ್ರೆಗೆ ಕೊಂಡೊಯ್ಯಲು 108, ವಾಹನವನ್ನು ಸರ್ಕಾರ ನೀಡಿದೆ. ಈ ಅಂಬುಲೆನ್ಸ್‌ನ ಚಾಲಕರು ರೋಗಿ ಕಡೆಯವರೊಂದಿಗೆ ದರ್ಪದಿಂದ ವರ್ತಿಸುತ್ತಾರಲ್ಲದೆ ಹಾಸನಕ್ಕೆ ರೋಗಿಯನ್ನು ಕರೆದೊಯ್ಯಬೇಕಾದ ಸಂದರ್ಭದಲ್ಲಿ ಕರೆದರೆ ಹಣ ಕೇಳುತ್ತಾರೆ. ಶಸ್ತ್ರ ಚಿಕಿತ್ಸಾ ವಿಭಾಗ ಸುಲಿಗೆ ಕೇಂದ್ರವಾಗಿದ್ದು ಇಲ್ಲಿ ಹೇಳುವವರು ಕೇಳುವವರು ಇಲ್ಲದಂತಾಗಿದೆ.

ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಆಸ್ಪತ್ರೆಯ ಸ್ವಚ್ಛತಾ ಸಿಬ್ಬಂದಿಗಳಿಗೆ ಕೈಚೀಲ, ಗಮ್‌ಬೂಟ್, ಕರವಸ್ತ್ರ ಮುಂತಾದ ಸೌಲಭ್ಯಗಳನ್ನು ನೀಡದೆ ನಿರ್ಲಕ್ಷಿಸಲಾಗಿದೆ. ಅಲ್ಲದೆ ಹೊರಗುತ್ತಿಗೆ ನೌಕರರಿಗೆ ಸರ್ಕಾರದ ಸುತ್ತೋಲೆ ಪ್ರಕಾರ ಪಿ.ಎಫ್, ಮತ್ತು. ಇ.ಎಸ್.ಐ. ಕಟ್ಟಿದ ಮೇಲೆ ರಸೀದಿ ನೀಡಬೇಕು. ನಂತರ ಚೆಕ್ ಕೊಡಬೇಕೆಂಬ ನಿಯಮವಿದ್ದರೂ ಇದನ್ನು ಉಲ್ಲಂಘಿಸಿ ಗುತ್ತಿಗೆದಾರರಿಗೆ ಮೊದಲೇ ಚೆಕ್ ನೀಡಲಾಗುತ್ತಿದೆ ಅಲ್ಲದೆ 2016-17 ರ ಸರ್ಕಾರದ ಸುತ್ತೋಲೆಯ ನಿಯಮದಂತೆ ವೇತನವನ್ನು ಸರಿಯಾಗಿ ಕೊಡುತ್ತಿಲ್ಲ. ಶೇ 80ಕ್ಕೆ ಬದಲಾಗಿ ಶೇ 60ರಷ್ಟು ಮಾತ್ರ ಗುತ್ತಿಗೆದಾರರು ನೀಡುತ್ತಿದ್ದಾರೆ.

ಆಸ್ಪತ್ರೆಯಲ್ಲಿ ಒಟ್ಟು 12-13 ಮಂದಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರಿರಬಹುದಾಗಿದ್ದರೂ ಪ್ರತಿನಿತ್ಯ 2-4 ಜನ ವೈದ್ಯರು ಮಾತ್ರ ರೋಗಿಗಳ ತಪಾಸಣೆಯಲ್ಲಿ ತೊಡಗುತ್ತಾರೆ. ಆದರೆ ಇನ್ನುಳಿದ ವೈದ್ಯರು ಆಸ್ಪತ್ರೆಯಲ್ಲಿ ಕಾಣಸಿಗುತ್ತಿಲ್ಲ. ಸರ್ಕಾರದ ರಜಾ ದಿನಗಳಲ್ಲೂ ಸಹ ಕೇವಲ 2-3 ಜನ ವೈದ್ಯರು ಮಾತ್ರ ರೋಗಿಗಳನ್ನು ಪರೀಕ್ಷಿಸುವ ಹಾಗೂ ಚಿಕಿತ್ಸೆ ನೀಡುತ್ತಿರುವ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೊರ ರೋಗಿಗಳ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲೂ ಇಷ್ಟು ಸಂಖ್ಯೆಯ ವೈದ್ಯರ ಕರ್ತವ್ಯ ನಿರ್ವಹಿಸುವುದು ಕಂಡು ಬಂದಿದೆ. ಉಳಿದವರು ಎಲ್ಲಿ ಹೋಗಿರುತ್ತಾರೆಂಬುದು ಗೊತ್ತಾಗುತ್ತಿಲ್ಲ. ಪ್ರತಿದಿನ 11 ಗಂಟೆಯಾದರೂ ಸಹ ವೈದ್ಯರು ಕರ್ತವ್ಯ ನಿರ್ವಹಿಸದೆ ಕಾಲ ಹರಣ ಮಾಡುತ್ತಿರುತ್ತಾರೆ. ಇನ್ನು ಶನಿವಾರ ಭಾನುವಾರ ಬಂದರೆ 11 ಗಂಟೆಗೆ ಆಸ್ಪತ್ರೆಗೆ ಬರುವ ವೈದ್ಯರು 12 ಗಂಟೆಗೆ ಹೋಗುವುದನ್ನು ಮಾಮೂಲು ಮಾಡಿಕೊಂಡಿದ್ದಾರೆ. ಆದರೆ ತಿಂಗಳ ಪೂರ್ತಿ ಹಾಜರಾತಿ ಇರುತ್ತದೆ ಎಂದು ಗುರುತರ ಆರೋಪ ಮಾಡಿರುವ ಸದಸ್ಯರು ಇಷ್ಟೆಲ್ಲಾ ಸಮಸ್ಯೆಗಳನ್ನು ತುಂಬಿಕೊಂಡು ಅವ್ಯವಸ್ಥೆಯಿಂದ ಕೂಡಿರುವ ಆಸ್ಪತ್ರೆಗೆ ಮೇಜರ್ ಸರ್ಜರಿ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಂಡು ಬಡ ರೋಗಿಗಳಿಗೆ ಉಚಿತವಾಗಿ ಉತ್ತಮ ಚಿಕಿತ್ಸೆ ದೊರಕಿಸಿಕೊಡುವಂತೆ ಕೋರಿ ಆರೋಗ್ಯ ಸಚಿವರು ಸೇರಿದಂತೆ ಆರೋಗ್ಯ ಇಲಾಖೆಯ ಜಿಲ್ಲಾ ಮತ್ತು ರಾಜ್ಯ ಮಟ್ಟದ ಹಿರಿಯ ಅಧಿಕಾರಿಗಳಿಗೆ ಮನವಿ ಪತ್ರ ಕಳಿಸಲಾಗುವುದು. ಇಂದು ಆಸ್ಪತ್ರೆಯ ತಾಲ್ಲೂಕು ಆಡಳಿತಾಧಿಕಾರಿಗಳ ಅನುಪಸ್ಥಿಯಲ್ಲಿ ಕರ್ತವ್ಯ ನಿರತ ವೈದ್ಯ ರಮೇಶ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಸದಸ್ಯರು ತಿಳಿಸಿದ್ದಾರೆ.

ಹಾಸನ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆರೋಗ್ಯ ರಕ್ಷಾ ಸಮಿತಿ ಸಭೆ ಈಗಾಗಲೆ ನಡೆದಿದ್ದು ಆ ಸಭೆಯಲ್ಲಿ ಎಲ್ಲಾ ಇಲಾಖೆಯ ಮುಖ್ಯಸ್ಥರೊಂದಿಗೆ ಚರ್ಚಿಸಿ ಹಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಸಭೆಯಲ್ಲಿ ಹೊರರೋ ಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಪ್ರಸ್ತುತ ಸರಬರಾ ಜಾಗುತ್ತಿರುವ ಔಷಧಿ ಮಾತ್ರೆಗಳು ಸಾಕಾಗುತ್ತಿಲ್ಲ. ಜೊತೆಗೆ ದಿನೇ ದಿನೇ ರೋಗಿಗಳ ಸಂಖ್ಯೆ ಸಹ ಹೆಚ್ಚಾಗುತ್ತಿದ್ದು ಇದರ ಜೊತೆಗೆ ಹೊರ ತಾಲ್ಲೂಕುಗಳಿಂದಲೂ ರೋಗಿಗಳು ಚಿಕಿತ್ಸೆಗಾಗಿ ಇಲ್ಲಿಗೆ ಬರುತ್ತಿರುವುದರಿಂದ ಔಷಧಿ ಪೂರೈಸಲಾಗುತ್ತಿಲ್ಲ. ಸರ್ಕಾರ ಔಷಧಿ ಸರಬರಾಜು ಮಾಡು ವುದು ವಿಳಂಬ ಆದ ಸಂದರ್ಭದಲ್ಲಿ ಹೊರ 'ಗಡೆಯಿಂದ ತರಿಸಿಕೊಂಡು ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. -ಡಾ|| ರಮೇಶ್

Kaveri Grameena Bank
Regional Office: Hassan

Premises Required

Commercial Premises required for
Branch at Nuggehally, In the following areas
Nuggehally village, Channarayapatna Taluq.

Note:
- Bank requires about 1100 sq feet 1300 sq feet (+10 or -10%) of carpet area. Preference will be given to ground floor,and constructed/under construction premises.
- Required power sanction to be made available (minimum 6kv)
- Competent authority should have sanctioned a plan for construction of commercial building and issued license accordingly.
- Lease period will be for a period of 9/15 years.
- Strong Room/Locker Room, to be constructed as per bank requirement.
- The tender bid may be submitted to our office before 31.10.2017 – 5 PM. Tender fee shall be Rs.500/- payable in favor of Kaveri Grameena Bank, payable at Hassan.
- Tender must be superscribed as Nuggehally branch premises technical bid and Nuggehally branch premises financial tender.
- The bank reserves the right to reject any or all the proposals without assigning any reason. Proposals received after the last date and time will not be considered.
- Place: Hassan Date:11.10.2017 Regional Manager